ಈಗಾಗಲೇ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಅತಿ ಶೀಘ್ರದಲ್ಲಿಯೇ ಸಿಬ್ಬಂದಿ ಹಾಗೂ ವಾಹನಗಳನ್ನು ಪೂರೈಸಿ ಕೊರತೆಯನ್ನು ನಿವಾರಿಸಲಾಗುವುದು. ಸರ್ಕಾರವು ಪತ್ರ ಸಂಖ್ಯೆ:ಒಸಾಇ. 22. ಟಿಆರ್‌ಇ.2000 ದಿನಾಂಕ 23-06-2000 ರನ್ವಯ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 898 ಚಾಲಕರ ಹಾಗೂ 821 ನಿರ್ವಾಹಕರ ಹುದ್ದೆಗಳನ್ನು ತುಂಬಲು ಅನುಮತಿ ನೀಡಿದ್ದು ವಿಜಾಪುರ ವಿಭಾಗದಲ್ಲಿ 184 ಚಾಲಕರನ್ನು ನೇರ ನೇಮಕಾತಿಯಲ್ಲಿ ಆಯ್ಕೆ ಮಾಡಲಾಗಿದೆ. ಸದರಿ ಆಯ್ಕೆ ಹೊಂದಿದ ಚಾಲಕರನ್ನು ತರಬೇತಿಗೆ ನಿಯೋಜಿಸಿದ್ದು, ಚಾಲಕರ ಕೊರತೆಯನ್ನು ತುಂಬಲಾಗುವುದು. ವಿಜಾಪುರ ವಿಭಾಗದಲ್ಲಿ 135 ನಿರ್ವಾಹಕ ಹುದ್ದೆಯ ಆಯ್ಕೆ ಪ್ರಕ್ರಿಯೆ ಪ್ರಗತಿಯ ಹಂತದಲ್ಲಿದ್ದು ನವೆಂಬರ್ 2000ದ ಒಳಗೆ ಮುಗಿಸಿ ಕೊರತೆ ತುಂಬಲಾಗುವುದು.

ಹೆಚ್ಚುವರಿ ಅಂಗನವಾಡಿಗಳ ಬಗ್ಗೆ

2992 - ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಂಗನವಾಡಿ ಕಾರ್ಯಕರ್ತೆಯವರು ಹತ್ತು ವರ್ಷ ಸೇವೆ ಸಲ್ಲಿಸಿದವರಿಗೆ ಅಂಗನವಾಡಿ ಮೇಲ್ವಿಚಾರಕರ ಹುದ್ದೆಗೆ ಆಯ್ಕೆ ಮಾಡಲು ಕ್ರಮ ಜರುಗಿಸಲಾಗಿದೆ?*

ಆ) *ಅಂಗನವಾಡಿ ಕಾರ್ಯಕರ್ತೆಯವರು ಹತ್ತು ವರ್ಷ ಸೇವೆ ಸಲ್ಲಿಸಿದವರು ಎಷ್ಟು ಮಂದಿ ಈ ಹಿಂದೆ ಆಯ್ಕೆ ಸಮಿತಿಗೆ ಅರ್ಜಿ ಹಾಕಿದ್ದಾರೆ?*

ಇ) *ಹೆಚ್ಚುವರಿ ಅಂಗನವಾಡಿಯ ಬೇಡಿಕೆಯನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆಯೆ?*

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) 3384 ಅಭ್ಯರ್ಥಿಗಳು, ಆಯ್ಕೆ ಸಮಿತಿಗೆ ಅರ್ಜಿ ಸಲ್ಲಿಸಿರುತ್ತಾರೆ.

ಇ) ರಾಜ್ಯಕ್ಕೆ ಒಟ್ಟು 6655 ಹೆಚ್ಚುವರಿ ಅಂಗನವಾಡಿ ಕೇಂದ್ರಗಳ ಬೇಡಿಕೆ ಇದ್ದು, ಈ ಬಗ್ಗೆ 13-1-97ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ, ಕೇಂದ್ರ ಸರ್ಕಾರವು ಸಂಪನ್ಮೂಲದ ಕೊರತೆಯಿಂದ ಈಗ ಸಧ್ಯಕ್ಕೆ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದೆ.

ಅಕ್ರಮ ಜಮೀನು ಸಕ್ರಮ ಕೋರಿರುವ ಅರ್ಜಿಗಳ ವಜಾ

2993 - ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಕ್ರಮ ಸಾಗುವಳಿ ಮಾಡಿದ ರೈತರ ಜಮೀನನ್ನು ಸಕ್ರಮ ಮಾಡುವ ಬಗ್ಗೆ ನಮೂನೆ-50ರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಖುಷ್ಕಿ ಜಮೀನುಗಳ ಅರ್ಜಿಗಳನ್ನು ಅರ್ಜಿದಾರರಿಗೆ ತಿಳಿಸದೆ*